ಸುದ್ದಿ ಹೇಳಿದ್ದೇ ಮೈಯಲ್ಲಿ ನಡುಕ ಹುಟ್ಟಿ ಇನ್ನೆಂದೂ ಈ ದಾರಿಯಲ್ಲಿ ಒಬ್ಬಳೇ ಓಡಾಡುವ ಧೈರ್ಯ ಮಾಡಲಾರೆ ಎಂಬ ಭ್ರಮೆಯನ್ನು ನನಗರಿವಿಲ್ಲದಂತೆಯೇ ನಾನಾಗಿಯೇ ಬೆಳೆಸಿಕೊಂಡಿದ್ದೆನೆನ್ನುವುದು ಖಾತ್ರಿಯಾದಷ್ಟೂ ನಾನು ಕಂಗಾಲಿಗೆ ಬಿದ್ದೆ. ಧೈರ್ಯಕ್ಕಿರಲಿ ಎಂದು ಬಲಕಿನ ಕೈಲಿ ಹಿಡಿದಿರುವ ಬಡಿಗೆಗೆ ನನ್ನ ಸಹಾಯಕ್ಕೆ ನಿಲ್ಲುವ ಯಾವ ಲಕ್ಷಣವೂ ಇರಲಿಲ್ಲ.



ಮರೆಗುಳಿ ಚಿಕ್ಕಯ್ಯ ಇಂದು ಕಿಬ್ಬಳ್ಳಿಗೇ ಬಂದು ನನ್ನನ್ನು ಮನೆಗೆ ಕರೆದೊಯ್ಯುವವನಿದ್ದ. ಕಿಬ್ಬಳ್ಳಿಗೆ ಬಂದಿದ್ದ ಕೂಡ. 'ನಾಳೆಯಿಂದ ನಾಲ್ಕು ದಿನ ಸಾಲ್ನೇರ್ತಾ ರಜೆಯಿದೆ ಸೊಸೈಟಿಗೆ. ಇವತ್ತು ಬಿಟ್ಟುಕೊಂಡರೆ ಆಗುವ ಮಾತಲ್ಲ. ಸೊಸೈಟಿಯ ಕೆಲಸ ಮುಗಿಸಿ ಬಂದುಬಿಡುತ್ತೇನೆ, ಇಲ್ಲೇ ಬಸ್‌ಸ್ಟಾಪಿನಲ್ಲಿ ಕುಳಿತಿರು. ನಾನು ಕೆಲಸ ಮುಗಿಸಿ ಬರಲು ಹತ್ತು ನಿಮಿಷ ಆಚೆ ಈಚೆಯಾದರೂ ಚಿಂತೆಯಿಲ್ಲ, ಆದರೆ ಒಬ್ಬಳೆ ಮಾತ್ರ ಮನೆಗೆ ಹೊರಡುವ ಹುಂಬ ಧೈರ್ಯ ಮಾಡ್ಬೇಡ.' ಎಂದು ಹೇಳಿ ಸೊಸೈಟಿ ಕಡೆ ಹೋದ ಚಿಕ್ಕಯ್ಯನನ್ನು ಕಾಯುತ್ತಾ ಕುಳಿತಿದ್ದೇ ಬಂತು, ಮೂರು ತಾಸಾದರೂ ಆಸಾಮಿ ಪತ್ತೆಯಿರಲಿಲ್ಲ... ಈ ಚಿಕ್ಕಯ್ಯನಿಗೆ ದಾರಿಯಲ್ಲಿ ಯಾರಾದರೂ ಸಿಕ್ಕಿ ಮನೆಗೆ ಕರೆದಿರಬೇಕು, ಚಾ ಕುಡಿಯುತ್ತ ಹಲುಬಲು ಕುಳಿತರೆ ಚಿಕ್ಕಯ್ಯನಿಗೆ ಹೊತ್ತುಗೊತ್ತಿನ ಪರಿವೆಯೂ ಇರುವುದಿಲ್ಲ.

ಇಷ್ಟೆಲ್ಲಾ ತಡಮಾಡಿ ಬರುತ್ತಾನೆ ಎಂಬ ಅಂದಾಜು ಮೊದಲೇ ಇದ್ದಿದ್ದರೆ ಬಾಡಿಗೆ ಬೈಕನ್ನಾದರೂ ಮಾಡಿಕೊಂಡು ಮನೆಗೆ ಹೊರಟುಬಿಡುತ್ತಿದ್ದೆ. ಈಗ ಆರು ಗಂಟೆಯೂ ಆಯ್ತು, ಇಷ್ಟು ಹೊತ್ತಿನ ಮೇಲೆಲ್ಲಾ ಯಾರು ತಾನೆ ಹಳ್ಳಿಯ ಮೂಲೆಗೆ ಬಾಡಿಗೆಗೆ ಬರುತ್ತಾರೆ! ಒಂದಕ್ಕೆರಡರಷ್ಟು ಬಾಡಿಗೆ ಕೊಡುತ್ತೇನೆಂದು ಮನೆಬಾಗಿಲಿಗೆ ಅವರನ್ನು ಕರೆಯಲು ಹೋದರೆ, 'ಪೆಟ್ರೋಲ್ ಖಾಲಿ ಆಗಿದೇರಿ, ನಾಳೆ ಯಲ್ಲಾಪುರದಿಂದ ತರಿಸಬೇಕು' ಎಂದು ಪ್ರತಿದಿನದ ಸುಳ್ಳನ್ನೇ ಇಂದೂ ಬಿತ್ತರಿಸುತ್ತಾರೆಂದು ತಿಳಿದೇ ಯಾರದ್ದೋ ಮನೆಬಾಗಿಲಿಗೆ ಹೋಗಿ ಬೇಡಿ ಸಣ್ಣವರಾಗುವುದಕ್ಕಿಂತ ಎಡೆಯಾದಂತೆ ನಡೆಯುವುದೇ ಲೇಸು ಎಂದು ಬೈದುಕೊಂಡು ಗೋಟಾರಿ ಚೀಲವನ್ನು ಹಿಡಿದು ಮನೆಯತ್ತ ಹೊರಟಿದ್ದೆನೆನ್ನುವುದೇನೋ ಸರಿ... ಆದರೆ ಶರಾವತಿಯ ನೆನಪು ದೂರ ತಳ್ಳಿದಷ್ಟೂ ಬಿಗಿಯಾಗಿ ನನ್ನನ್ನು ಮುತ್ತುತ್ತಿತ್ತು!

ಸಾಮಾನ್ಯವಾಗಿ ಆಯಿ ತಾನಾಗಿ ಫೋನು ಮಾಡುವವಳಲ್ಲ, ಫೋನು ಮಾಡಿದರೆ ಎರಡು ಸಾಲಿನ ನಂತರ ಜಪ್ಪಯ್ಯ ಎಂದರೂ ಮೂರನೆಯ ಮಾತನ್ನಾಡುವುದಿಲ್ಲ. ಅಂಥವಳು ಕಳೆದವಾರ ಅವಳಾಗಿಯೇ ಫೋನು ಮಾಡಿಕೊಂಡು, 'ಅಯ್ಯೋ 'ಒಂದು ಸುದ್ದಿ ಗೊತ್ತೇನೇ ನಿಂಗೆ, ಗೋಪತ್ತೆ ಮನೆಗೆ ಕೆಲಸಕ್ಕೆ ಬರುವ ಶರಾವತಿ ಇದ್ದಾಳಲ್ಲ, ಚಾಣ ಹಾಕುತ್ತಾನೆ, ಹೆಜ್ಜೇನು ಕೊಯ್ತಾನೆ ನೋಡು ಕೋಟಿ ಅವನ ಹೆಂಡತಿ ಶರಾವತಿ. ಕಟ್ಟಿಗೆ, ಒಣ ಜಿಗ್ಗು ಮುರಿದುಕೊಂಡು ಬರಲು ಕಾನಿಗೆ

